## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 8187/2023 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ರೇಶ್ಮಾ |
| ತಂದೆಃ ಗಂಡ | ಃ | ರಫೀಕ್ ಮುಲ್ಲಾ |
| ವಯಸ್ಸು | ಃ | ೩೬ ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | ಃ | ಆಳಂದ |

ದಿನಾಂಕಃ ೧೧.೦೨.೨೦೨೫

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ನಂ.೧ ನನ್ನ ಗಂಡ, ಆರೊಪಿ ನಂ.೨ ನನ್ನ ಅತ್ತೆ, ಆರೋಪಿ ನಂ.೩ ನಾದಿನಿ, ಚಾಸಾ-೬ ನನ್ನ ತಾಯಿ, ಚಾಸಾ-೭ ನನ್ನ ಮಾವನ ಮಗ, ಚಾಸಾ-೮ ರಿಂದ ೧೦ ಆರೋಪಿಯ ಸ್ನೇಹಿತರು.

ದಿ. 15.07.2023 ರಂದು ಆರೋಪಿ ನಮ್ಮ ಮನೆಯಲ್ಲಿ ನನ್ನ ತಾಯಿಯ ಮುಂದೆ ನನಗೆ ಮೂರು ಸಲ ತಲಾಖ್ ತಲಾಖ್ ತಲಾಖ್ ಎಂದು ಹೇಳಿರುತ್ತಾನೆ. 2024 ರಲ್ಲಿ ರಂಜಾನ್ ತಿಂಗಳಿನಲ್ಲಿ ಬಾತರೂಮನಲ್ಲಿರುವ ಬಕೇಟಿನಿಂದ ತಲೆಗೆ ಹೊಡೆದು ರಕ್ತಗಾಯಪಡಿಸಿರುತ್ತಾನೆ. ನಂತರ ಒಂದು ವಾರ ಬಿಟ್ಟು ಆರೋಪಿ ನಂ.೩ ಕಪಾಳಕ್ಕೆ ಹೊಡೆದು ಕೂದಲು ಹಿಡಿದು ಗ್ಯಾಸ ಸ್ಟವ್ ಮೇಲೆ ಹಿಡಿದಿರುತ್ತಾಳೆ. ನಂತರ ಖಾಜಿಯ ಮುಂದೆ ಆರೋಪಿ ನಂ.೨ ನನಗೆ ಹೊಡೆದಿರುತ್ತಾಳೆ. ನಂತರ ನಾನು ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ. 2024 ರ ಸೆಪ್ಟೆಂಬರನಲ್ಲಿ ರಾಜಿಯಾಗಿರುತ್ತೇವೆ, ಮತ್ತೆ ಜಗಳ ಮಾಡಿ 15000/- ಗಳನ್ನು ತೆಗದುಕೊಂಡು ಹೋಗಿರುತ್ತಾನೆ. 10000/- ಗೂಗಲ್ ಪೇ, 5000/- ಕ್ಯಾಶ್ ಒಯ್ದಿರುತ್ತಾನೆ. ನಂತರ ಅಕ್ಟೋಬರದಲ್ಲಿ 3-4 ದಿನ ಇದ್ದು ಹೋಗಿರುತ್ತಾನೆ. ಡಿಸೆಂಬರನಲ್ಲಿ ಇದ್ದು ಜಗಳ ಮಾಡಿ ಹೋಗಿರುತ್ತಾನೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಫಿರ್ಯಾದಿಯನ್ನು ನಿಪಿ-೧ ಎಂದು, ಸಹಿಯನ್ನು ನಿಪಿ-೧(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.೨೮.೧೨.೨೦೧೫ ರಂದು ಆರೋಪಿ ನಂ.೧ ರವರ ಜೊತೆ ಮಹಮ್ಮದೀಯ ಸಂಪ್ರದಾಯದ ಪ್ರಕಾರ ನನಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂಧರೆ ಸರಿ. ಮದುವೆಯ ನಂತರ ಸ್ವಲ್ಪ ದಿನ ನನ್ನನ್ನು ಚೆನ್ನಾಗಿ ಇಟ್ಟುಕೊಂಡಿರುತ್ತಾನೆ ಎಂಧರೆ ಸರಿ, ಸಾಕ್ಷಿ ಮುಂದುವರೆದು

೨೦೧೯ ರವರೆಗೆ ಚೆನ್ನಾಗಿ ಇಟ್ಟುಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ರಾತ್ರಿ ಲೇಟಾಗಿ ಯಾಕೆ ಬರುತ್ತೀಯ ಎಂದು ಕೇಳಿದಕ್ಕೆ ಆರೋಪಿ ನಂ.೧ ಏ ರಂಡಿ ನನ್ನನ್ನು ಯಾಕೆ ಕೇಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದನು ಎಂದರೆ ಸರಿ. ಆರೊಪಿ ನಂ.೧ ಕಬ್ಬಿಣದ ಪೈಪಿನಿಂದ ನನ್ನ ತಲೆಗೆ ಹೊಡೆದಿರುತ್ತಾನೆ ಎಂದರೆ ಸರಿ. ದಿ.೧೨.೦೪.೨೦೨೩ ರಂದು ಸಾಯಂಕಾಲ ೬.೦೦ ಗಂಟೆಗೆ ಮನೆಗೆ ಬಂದಾಗ ನಾನು ಯಾಕೆ ನಿನ್ನೆ ರಾತ್ರಿ ಹೋದವರು ಈಗ ಬರುತ್ತಿದ್ದೀರಿ ಎಂದು ಕೇಳಿದಾಗ ಏ ರಂಡಿ ನೀನು ಮತ್ತೆ ಎಲ್ಲಿಗೆ ಹೋಗಿದ್ದಿಯಾ ಎಂದು ಕೇಳುತ್ತೀಯಾ ಸೂಳೆ ಎಂದು ಅವಾಚ್ಯ ಶಬ್ದಗಳಿಂದ ಬೈದನು ಎಂದರೆ ಸರಿ. ದಿ.೧೯.೦೪.೨೦೨೩ ರಂದು ಸಾಯಂಕಾಲ ೪.೦೦ ಗಂಟೆಗೆ ಆರೋಪಿ ನಂ.೩ ನಿನ್ನ ಗಂಡ ಎಲ್ಲಿಯಾದರೂ ಹೋಗುತ್ತಾನೆ ಅವನ್ಯಾಕೆ ಕೇಳುತ್ತೀಯಾ ಎಂದು ಬೈದಳು ಎಂಧರೆ ಸರಿ. ಸದರಿ ಜಗಳದ ವಿಷಯವನ್ನು ನನ್ನ ತಾಯಿಗೆ ಹೇಳಿರುತ್ತೇನೆ ಎಂಧರೆ ಸರಿ. ದಿ.೧೫.೦೭.೨೦೨೩ ರಂದು ನನ್ನ ತಾಯಿ ನಮ್ಮ ಮನೆಗೆ ಬಂದು ವಿಚಾರಿಸಿದ್ದಳು ಎಂದರೆ ಸರಿ. ದಿ.೧೬.೦೭.೨೦೨೩ ರಂದು ಸಾಯಂಕಾಲ ೭.೦೦ ಗಂಟೆಗೆ ನನ್ನ ಗಂಡ ನನಗೆ ತಲಾಖ ತಲಾಖ ತಲಾಖ ಎಂದು ಹೇಳಿರುತ್ತಾನೆ ಎಂದರೆ ಸರಿ.

ದಿ.೦೩.೦೮.೨೦೨೩ ರಂದು ಆರೊಪಿ ನಂ.೨ ತಲಾಖ್ ನೀಡಿದ್ದರೂ ಯಾಕೆ ಮನೆಯಲ್ಲಿದ್ದಿಯಾ ಮನೆ ಬಿಟ್ಟು ಹೋಗು ರಂಡಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಹೋಗದಿದ್ದರೆ ಜೀವ ಸಹಿತ ಖಲಾಸ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿದಳು ಎಂದರೆ ಸರಿ. ಚಾಸಾ-೮, ೯ ರವರು ಸದರಿ ಜಗಳವನ್ನು ನೋಡಿ ಬಿಡಿಸಿರುತ್ತಾರೆ ಎಂದರೆ ಸರಿ. ನಾನು ಪಿರ್ಯಾದಿ ಸಲ್ಲಿಸಿದ ಮರುದಿನ ಪೋಲಿಸರು ಬಂದು ಮಧ್ಯಾಹ್ನ ೧.೩೦ ರಿಂದ ೨.೩೦ ರವರೆಗೆ ಪಂಚನಾಮೆ ಜರುಗಿಸಿರುತ್ತಾರೆ ಎಂಧರೆ ಸರಿ. ದಿ.೦೫.೦೮.೨೦೨೩ ರಂದು ಪಂಚನಾಮೆ ಕಾಲಕ್ಕೆ ಪೊಲಿಸರು ಲಗ್ನ ಪತ್ರ ಮತ್ತು ಭಾವಚಿತ್ರ ಪಡೆದುಕೊಂಡಿರುತ್ತಾರೆ ಎಂಧರೆ ಸರಿ. ದಿ. ೦೫.೦೮.೨೦೨೩ ರಂದು ನನ್ನ ಗಂಡ ದಿ.೧೬.೦೭.೨೦೨೩ ರಂದು ಜಗಳ ಮಾಡಿ ಹೊಡೆ ಬಡೆ ಮಾಡುವ ಕಾಲಕ್ಕೆ ನನಗೆ ಮೂರು ಸಲ ತಲಾಖ್ ತಲಾಖ್ ತಲಾಖ್ ಎಂದು ಹೇಳಿದ್ದಾನೆ ಎಂದು ತಪ್ಪಾಗಿ ನಮೂದು ಆಗಿರುತ್ತದೆ ಎಂದು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲ. ಸಾಕ್ಷಿ ಹೇಳಿಕೆ ವ್ಯತಿರಿಕ್ತವಾಗಿ ನುಡಿದಿದ್ದರಿಂದ ಮರು ಹೇಳಿಕೆಯನ್ನು ನಿಪಿ-೨ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಡಿ.ಎಸ್.ಎನ್. ವಕೀಲರಿಂದ</u>**

ನಾನು ಬಿ.ಎ. ಪದವಿಧರಳು ಇರುತ್ತೇನೆ. ಆರೋಪಿ ನಂ.೧ **೧೦** ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತಾನೆ. ಆರೋಪಿ ನಂ.೧ ನನ್ನನ್ನು ಆಗಾಗ ಹೊಡೆ ಬಡೆ ಮಾಡಿರುತ್ತಾನೆ ಎಂದು ಹೇಳುತ್ತಿರಲ್ಲ, ಯಾರ ಸಮಕ್ಷಮದಲ್ಲಿ ಹೊಡೆ ಬಡೆ ಮಾಡಿರುತ್ತಾನೆ ಎಂದು ಹೇಳಲು ಬರುತ್ತದೆಯಾ ಎಂಧರೆ ಸಾಕ್ಷಿ ಯಾರು ಇರಲಿಲ್ಲ, ನಾವಿಬ್ಬರೇ ಇದ್ದೆವು ಎಂದು ನುಡಿಯುತ್ತಾರೆ. ನಮ್ಮ ಮಕ್ಕಳು ನಮ್ಮ ಜೊತೆಯೇ ಇದ್ದರು. ನನ್ನ ತಾಯಿ ಮುಂಬೈಯಲ್ಲಿ ವಾಸವಿರುತ್ತಾಳೆ. ಸದರಿ ಜಗಳವನ್ನು ನೀವು ನಿಮ್ಮ ತಾಯಿಗೆ ಹೇಳಿದೆನು ಎಂದು ಹೇಳುತ್ತಿರಲ್ಲ, ನಂತರ ಅವರು ಬಂದು ಅವರ ಸಮಕ್ಷಮವೂ ಜಗಳ ಆಗಿರುತ್ತದೆ ಎಂದು ಹೇಳುತ್ತಿರಲ್ಲ ಆಗ ಫಿರ್ಯಾದಿಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ದಿ.**೧೯.೦೪.೨೦೨೪** ರಂದು ಆಸ್ಪತ್ರೆಗೆ ಹೋಗಿ ತೋರಿಸಿರುತ್ತೇನೆ. ಸದರಿ ಘಟನೆಯ ಹಿನ್ನಲೆ ಆಧಾರದ ಮೇಲೆ ಹೋಗಿದ್ದಿರಲ್ಲ, ಅಲ್ಲಿ ಎಂ.ಎಲ್.ಸಿ.ಯನ್ನು ದಾಖಲು ಮಾಡಿಕೊಂಡರಾ ಎಂಧರೆ ಸಾಕ್ಷಿ

ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ, ಎಂ.ಎಲ್.ಸಿ ವರದಿಯೇ ಆಗಿರುವುದಿಲ್ಲ ಎಂದರೆ ಸರಿ ಅಲ್ಲ. ಆರೋಪಿ ನನ್ನನ್ನು ಯಾವತ್ತೂ ಹೊಡೆ ಬಡೆ ಮಾಡಿರುವುದಿಲ್ಲ, ಕಿರುಕುಳ ನೀಡಿರುವುದಿಲ್ಲ, ಆರೋಪಿಯಿಂದ ಹಣ ಪಡೆದುಕೊಳ್ಳುವುದಕ್ಕೋಸ್ಕರ ನಾನು ನನ್ನ ತಾಯಿ ಸೇರಿ ಈ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಆರೊಪಿ ನಂ.೧ ರವರನ್ನು ನಾನು ಇಲ್ಲಿಂದ ಮುಂಬೈಗೆ ಕರೆದುಕೊಂಡು ಹೋಗಿ ಅಲ್ಲಿ ಕೆಲಸಕ್ಕೆ ಹಚ್ಚಿ ಅಲ್ಲಿಯೇ ಇಟ್ಟುಕೊಳ್ಳಬೇಕೆಂಬ ಉದ್ದೇಶವನ್ನು ಹೊಂದಿರುತ್ತೇನೆ ಎಂದರೆ ಸರಿ ಅಲ್ಲ. ಅದೇ ಕಾರಣಕ್ಕೋಸ್ಕರ ನಾನಾಗಿಯೇ ಆರೊಪಿ ನಂ.೧ ರವರ ಜೊತೆ ಜಗಳ ತೆಗೆಯುತ್ತಿರುತ್ತೇನೆ ಎಂದರೆ ಸರಿ ಅಲ್ಲ. ಆರೋಪಿ ನಂ.೧ ರವರ ಪಾಲಿಗೆ ಬರುವ ಆಸ್ತಿಯನ್ನು ಮಾರಿ ಮುಂಬೈಗೆ ಹೋಗಬೇಕೆಂಬ ಉದ್ದೇಶ ಹೊಂದಿರುತ್ತೇನೆ ಎಂದರೆ ಸರಿ ಅಲ್ಲ, ಸಾಕ್ಷಿ ಅವನ ಹೆಸರಿಗೆ ಆಸ್ತಿಯೇ ಇರುವುದಿಲ್ಲ, ಹೊಲ ಇರುವುದಿಲ್ಲ, ಮನೆ ಇದೆ ಅದರ ಮೇಲೆ ಸಾಲ ಇರುತ್ತದೆ ಎಂದು ನುಡಿಯುತ್ತಾರೆ. ಆರೊಪಿ ನಂ.೩ ಅವಳ ಗಂಡನ ಮನೆಯಲ್ಲಿರುತ್ತಾಳೆ ಎಂಧರೆ ಸರಿ. ಆರೋಪಿ ನಂ.೨ ನಮ್ಮ ಜೊತೆ ಇರುವುದಿಲ್ಲ, ಬೇರೆ ಇರುತ್ತಾಳೆ ಎಂಧರೆ ಸರಿ. ನನ್ನ ಮಾವನಿಗೆ ಪಾರ್ಶ್ವರೋಗ ಇತ್ತು ಅವನೂ ಸಹ ಕೂಡ ಜೀವಂತ ಇರುವವರೆಗೂ ಆರೊಪಿ ನಂ.೨ ರವರ ಜೊತೆ ಬೇರೆ ಇರುತ್ತಿದ್ದನು ಎಂದರೆ ಸರಿ. ಅವರು ಯಾವತ್ತೂ ನಮ್ಮ ಜೊತೆ ಇರಲಿಲ್ಲ, ಬೇರೆನೇ ಇರುತ್ತಿದ್ದರು ಎಂದರೆ ಸರಿ. ಆರೊಪಿ ನಂ.೨ ಯಾವತ್ತೂ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಹೊಡೆ ಬಡೆ ಮಾಡಿರುವುದಿಲ್ಲ ಎಂದರೆ ಸರಿ ಅಲ್ಲ. ಪಂಚನಾಮೆ ಕಾಲಕ್ಕೆ ನೀವೇನಾದರೂ ಪಂಚನಾಮೆ ಬರೆಯಲು ಮಾಹಿತಿ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಫಿರ್ಯಾದಿಯನ್ನು ನಾನು ಬಾಯಿಯಿಂದ ಹೇಳಿರುತ್ತೇನೆ, ಮಹಿಳಾ ಪೇದೆಯು ಗಣಕೀಕೃತ ಮಾಡಿರುತ್ತಾರೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು ಪಿರ್ಯಾದಿಯನ್ನು ಓದಿರುವುದಿಲ್ಲ, ಆದರೆ ನನಗೆ ಓದಿ ಹೇಳಿರುತ್ತಾರೆ, ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಾನು ನನ್ನ ಫಿರ್ಯಾದಿಯಲ್ಲಿ ಆರೊಪಿ ನಂ.೧ ಪದೇ ಪದೇ ಜಗಳ ಮಾಡಿರುತ್ತಾನೆ ಎಂದು ಬರೆದಿರುವುದಿಲ್ಲ ಎಂಧರೆ ಸರಿ ಅಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ, ಆದರೆ ಫಿರ್ಯಾದಿಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಪೋಲಿಸರು ಓದಿ ಹೇಳಿರುತ್ತಾರೆ ಎಂದು ನುಡಿಯುತ್ಥಾರೆ. ಆರೊಪಿತರು ನನ್ನನ್ನು ಯಾವತ್ತು ಬೈದಿರುವುದಿಲ್ಲ, ಕಿರುಕುಳ ನೀಡಿರುವುದಿಲ್ಲ ಎಂದರೆ ಸರಿ ಅಲ್ಲ. ನಾನು ಮತ್ತು ನನ್ನ ತಾಯಿ ಖೊಟ್ಟಿ ಪಿರ್ಯಾದಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ ಅಲ್ಲ.

ಆರೋಪಿ ನಿಮ್ಮನ್ನು ಹೊಡೆದನು ಎಂದು ಹೇಳುತ್ತಿರಲ್ಲ, ನಿಮಗೆ ರಕ್ತಗಾಯವಾಗಿತ್ತಾ ಎಂದರೆ ಸಾಕ್ಷಿ ಆಗಿತ್ತು, ಸದರಿ ರಕ್ತ ನಿಮ್ಮ ಬಟ್ಟೆ ಮೇಲೆ ಬಿದ್ದಿತ್ತಾ ಎಂದರೆ ಸಾಕ್ಷಿ ಬಿದ್ದಿತ್ತು ಎಂದು ನುಡಿಯುತ್ತಾರೆ. ಸದರಿ ಬಟ್ಟೆಯನ್ನು ಪೋಲಿಸರು ಜಪ್ತಿಪಡಿಸಿಕೊಂಡರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ದಿ. **೧೫.೦೭.೨೦೨೩** ರಂದು ಆರೋಪಿ ನಮ್ಮ ಮನೆಯಲ್ಲಿ ನನ್ನ ತಾಯಿಯ ಮುಂದೆ ನನಗೆ ಮೂರು ಸಲ ತಲಾಖ್ ತಲಾಖ್ ತಲಾಖ್ ಎಂದು ಹೇಳಿರುತ್ತಾನೆ. **೨೦೨೪** ರಲ್ಲಿ ರಂಜಾನ್ ತಿಂಗಳಿನಲ್ಲಿ ಬಾತರೂಮನಲ್ಲಿರುವ ಬಕೇಟಿನಿಂದ ತಲೆಗೆ ಹೊಡೆದು ರಕ್ತಗಾಯಪಡಿಸಿರುತ್ತಾನೆ. ನಂತರ

ಒಂದು ವಾರ ಬಿಟ್ಟು ಆರೋಪಿ ನಂ.೩ ಕಪಾಳಕ್ಕೆ ಹೊಡೆದು ಕೂದಲು ಹಿಡಿದು ಗ್ಯಾಸ ಸ್ಟವ್ ಮೇಲೆ ಹಿಡಿದಿರುತ್ತಾಳೆ. ನಂತರ ಖಾಜಿಯ ಮುಂದೆ ಆರೋಪಿ ನಂ.೨ ನನಗೆ ಹೊಡೆದಿರುತ್ತಾಳೆ. ನಂತರ ನಾನು ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ. **೨೦೨೪** ರ ಸೆಪ್ಟೆಂಬರನಲ್ಲಿ ರಾಜಿಯಾಗಿರುತ್ತೇವೆ, ಮತ್ತೆ ಜಗಳ ಮಾಡಿ **೧೫೦೦೦/-** ಗಳನ್ನು ತೆಗದುಕೊಂಡು ಹೋಗಿರುತ್ತಾನೆ. **೧೦೦೦೦/-** ಗೂಗಲ್ ಪೇ, **೫೦೦೦/-** ಕ್ಯಾಶ್ ಒಯ್ದಿರುತ್ತಾನೆ. ನಂತರ ಅಕ್ಟೋಬರದಲ್ಲಿ **೩-೪** ದಿನ ಇದ್ದು ಹೋಗಿರುತ್ತಾನೆ. ಡಿಸೆಂಬರನಲ್ಲಿ ಇದ್ದು ಜಗಳ ಮಾಡಿ ಹೋಗಿರುತ್ತಾನೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಫಿರ್ಯಾದಿಯನ್ನು ನಿಪಿ-೧ ಎಂದು, ಸಹಿಯನ್ನು ನಿಪಿ-೧(ಎ) ಎಂದು ಗುರುತಿಸಲಾಯಿತು.

ರಾತ್ರಿ ಲೇಟಾಗಿ ಯಾಕೆ ಬರುತ್ತೀಯ ಎಂದು ಕೇಳಿದಕ್ಕೆ ಆರೋಪಿ ನಂ.೧ ಏ ರಂಡಿ ನನ್ನನ್ನು ಯಾಕೆ ಕೇಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೊಪಿ ನಂ.೧ ಕಬ್ಬಿಣದ ಪೈಪಿನಿಂದ ನನ್ನ ತಲೆಗೆ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ದಿ.೧೨.೦೪.೨೦೨೩ ರಂದು ಸಾಯಂಕಾಲ ೬.೦೦ ಗಂಟೆಗೆ ಮನೆಗೆ ಬಂದಾಗ ನಾನು ಯಾಕೆ ನಿನ್ನೆ ರಾತ್ರಿ ಹೋದವರು ಈಗ ಬರುತ್ತಿದ್ದೀರಿ ಎಂದು ಕೇಳಿದಾಗ ಏ ರಂಡಿ ನೀನು ಮತ್ತೆ ಎಲ್ಲಿಗೆ ಹೋಗಿದ್ದಿಯಾ ಎಂದು ಕೇಳುತ್ತೀಯಾ ಸೂಳೆ ಎಂದು ಅವಾಚ್ಯ ಶಬ್ದಗಳಿಂದ ಬೈದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ದಿ.೧೯.೦೪.೨೦೨೩ ರಂದು ಸಾಯಂಕಾಲ ೪.೦೦ ಗಂಟೆಗೆ ಆರೋಪಿ ನಂ.೩ ನಿನ್ನ ಗಂಡ ಎಲ್ಲಿಯಾದರೂ ಹೋಗುತ್ತಾನೆ ಅವನ್ಯಾಕೆ ಕೇಳುತ್ತೀಯಾ ಎಂದು ಬೈದಳು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಸದರಿ ಜಗಳದ ವಿಷಯವನ್ನು ನನ್ನ ತಾಯಿಗೆ ಹೇಳಿರುತ್ತೇನೆ, ದಿ.೧೫.೦೭.೨೦೨೩ ರಂದು ನನ್ನ ತಾಯಿ ನಮ್ಮ ಮನೆಗೆ ಬಂದು ವಿಚಾರಿಸಿದ್ದಳು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ದಿ.೧೬.೦೭.೨೦೨೩ ರಂದು ಸಾಯಂಕಾಲ ೭.೦೦ ಗಂಟೆಗೆ ನನ್ನ ಗಂಡ ನನಗೆ ತಲಾಖ ತಲಾಖ ತಲಾಖ ಎಂದು ಹೇಳಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ದಿ.**೦೩.೦೮.೨೦೨೩** ರಂದು ಆರೋಪಿ ನಂ.೨ ತಲಾಖ್ ನೀಡಿದ್ದರೂ ಯಾಕೆ ಮನೆಯಲ್ಲಿದ್ದಿಯಾ ಮನೆ ಬಿಟ್ಟು ಹೋಗು ರಂಡಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಹೋಗದಿದ್ದರೆ ಜೀವ ಸಹಿತ ಖಲಾಸ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿದಳು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಚಾಸಾ-೮, ೯ ರವರು ಸದರಿ ಜಗಳವನ್ನು ನೋಡಿ ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಪಿರ್ಯಾದಿ ಸಲ್ಲಿಸಿದ ಮರುದಿನ ಪೋಲಿಸರು ಬಂದು ಮಧ್ಯಾಹ್ನ **೧.೩೦** ರಿಂದ **೨.೩೦** ರವರೆಗೆ ಪಂಚನಾಮೆ ಜರುಗಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ದಿ.**೦೫.೦೮.೨೦೨೩** ರಂದು ಪಂಚನಾಮೆ ಕಾಲಕ್ಕೆ ಪೊಲಿಸರು ಲಗ್ನ ಪತ್ರ ಮತ್ತು ಭಾವಚಿತ್ರ ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ